https://www.kuvempuonline.com



# ಅಂಚೆ ಮತ್ತು ತೆರಪಿನ ಶಿಕ್ಷಣ
# ದ್ವಿತೀಯ ಬಿ.ಎ./ಬಿ.ಎಸ್ಸಿ. ಪದವಿ ಪರೀಕ್ಷೆ
# ಆಗಸ್ಟ್ / ಸೆಪ್ಟೆಂಬರ್ 2009
## ಕನ್ನಡ ಭಾಷಾ ಪತ್ರಿಕೆ - ೨
## (ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ - ೨, ತುಘಲಕ್, ಆಯ್ದ ಸಣ್ಣ ಕಥೆಗಳು, ದೇವರು)
## (ಹೊಸಬರಿಗೆ)

ಸಮಯ : 3 ಗಂಟೆಗಳು | ಅಂಕಗಳು : 80 ಅಂಕಗಳು

1. ಅ) **ಒಂದರ ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ.** — 07 ಅಂಕಗಳು

೧) ಅನ್ನೆಯದಿಂ ನಡೆವವರಂ
ನೀನ್ ನಿಯಮಿಸುವ್ಯೆ ದಶಾಸ್ಯ ತೆರನಾವಂ ನಿ
ನ್ನನ್ ನಿಯಮಿಸುವಂ ಮುನ್ನೀರ್
ಬೆನ್ನೀ ರನೆ ಬೆರಸಲಣ್ಣ ತಣ್ಣೀರೊಳವೇ

೨) ..... ನಿನ್ನ ನಾಲಗೆ ಶೂಲದಿಂದ ಆರಡಿ ಇಳಿದು ತೂಗುತ್ತಿರುವಾಗ
ಆಗ ಅದರ ಚಪಲತೆ ಎಷ್ಟಿರುತ್ತದೆ ನೋಡುತ್ತೇನೆ. ನಾನು ತಂದೆಯನ್ನು
ಲೆಕ್ಕಿಸಿಲ್ಲ, ಧರ್ಮ ಪಂಡಿತರನ್ನು ಲೆಕ್ಕಿಸಿಲ್ಲ, ಪ್ರಜೆಗಳನ್ನು ಲೆಕ್ಕಿಸಿಲ್ಲ -
ನಿನಗೆ ಬೆದರುವೆನೆಂದು ತಿಳಿದೆಯೇನು ? ನಿನಗೆ ? ಧರ್ಮ ಗುರುವಿನ ಬಟ್ಟೆಯಲ್ಲಿ
ಅಡಗಿ ಬಂದ ಅಗಸನಿಗೆ ?

ಆ) **ಎಂಟು ಪದಗಳಿಗೆ ಅರ್ಥ ಬರೆಯಿರಿ.** — 04 ಅಂಕಗಳು
ಕಾಯ, ಚರಿಗೆ, ದರ್ಪಣ, ಧುರ, ಬೆನ್ನೀರ್, ಗಡಣ, ಉದಧಿ, ದೀಪ್ತಿ, ರಜ, ಕಾಫರ, ತುರುಕ, ಸುಲ್ತಾನ

ಇ) **ಎರಡಕ್ಕೆ ಟಿಪ್ಪಣಿ ಬರೆಯಿರಿ.** — 2x 2 =4 ಅಂಕಗಳು
ಅನಂತವೀರ್ಯ ಕೇವಲಿಗಳು, ಮಲತಾಯಿ, ಅವಲೋಕಿನಿ.

2. **ಐದಕ್ಕೆ ಸಂದರ್ಭದೊಡನೆ ಸ್ವಾರಸ್ಯ ಬರೆಯಿರಿ.** — 3 x 5 = 15 ಅಂಕಗಳು

೧. ಸೂಳ್ಪಡೆಯಲಪ್ಪುದು ಕಾಣ ಮಹಾಜಿ ರಂಗದೊಳ್
೨. ಅಬ್ಧಿಯುಮೊರ್ಮೆ ಕಾಲವಶದಂ ಮರ್ಯಾದೆಯಂ ದಾಂಟದೇ
೩. ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ
೪. ನಿನ್ನ ನಾಮದ ಬಲವೊಂದಿದ್ದರೆ ಸಾಕೋ
೫. ನನಗೆ ಶಾಂತಿ ಬೇಕಾಗಿದೆ ರಕ್ತಪಾತ ನಿಲ್ಲಿಸಬೇಕಾಗಿದೆ.
೬. ಬಯಲಾಗಿ ಹೋಗಲಿ ದಿಲ್ಲಿ ! ಆಗಲೇ ನನಗೆ ಸಮಾಧಾನ
೭. ಇತಿಹಾಸವೆಂದರೆ ಒಂದು ಟಿಕ್ಕಾಟಿಕ್ಕಿ
೮. ನಿನ್ನ ರಾಜ್ಯವೆಂದರೆ ಮರಣದ ಬಚ್ಚಲು ಮನೆಯಾಗಿದೆ.

3. **ಒಂದು ಪ್ರಶ್ನೆಗೆ ಉತ್ತರಿಸಿ.** — 10 ಅಂಕಗಳು

೧) ಕೃಷ್ಣ, ಕರ್ಣನನ್ನು ಬೇಧಿಸಲು ಹೂಡಿದ ತಂತ್ರ, ಅದಕ್ಕೆ ಕರ್ಣನ ಪ್ರತಿಕ್ರಿಯೆಯನ್ನು ಸೋದಾಹರಣವಾಗಿ ವಿವರಿಸಿ.



https://www.kuvempuonline.com
https://www.kuvempuonline.com
https://www.kuvempuonline.com

https://www.kuvempuonline.com



೨) ಕುಲವನ್ನು ಪ್ರಶ್ನೆ ಮಾಡುವ ಕನಕದಾಸರು ಭಕ್ತಿ ಭಾವವನ್ನು ಕೀರ್ತನೆಗಳಲ್ಲಿ ಹೇಳಿರುವ ರೀತಿಯನ್ನು ತಿಳಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. 5 ಅಂಕಗಳು

೧) ಅಕ್ಕಮಹಾದೇವಿಯ ವಚನಗಳಲ್ಲಿ ವ್ಯಕ್ತವಾಗಿರುವ ಆತ್ಮನಿವೇದನೆ.

೨) ಮಾರಿದತ್ತನ ಮನಃ ಪರಿವರ್ತನೆಯನ್ನು ವಿವರಿಸಿ.

4. ಅ) ಒಂದು ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ರಾಜಧಾನಿ ಬದಲಾವಣೆಯಿಂದ ಹುಟ್ಟಿದ ಹೊಸ ಸಮಸ್ಯೆಗಳನ್ನು ತುಘಲಕ್ ಎದುರಿಸಿದ ಬಗೆ ಕುರಿತು ಬರೆಯಿರಿ.

೨) ಅಧಿಕಾರ ಹೊತ್ತ ದೊರೆಯ ಸುತ್ತ ಬೆಳೆದ ರಾಜಕಾರಣದ ಸ್ವರೂಪವನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. 5 ಅಂಕಗಳು

೧) ಶೇಖ್ ಇಮಾಮುದ್ದೀನ್ ವ್ಯಕ್ತಿತ್ವ

೨) ಅಝೀಝುನ ಅಧಿಕಾರ ದುರುಪಯೋಗ

5. ಒಂದು ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ಸುಬ್ಬಣ್ಣ ಗೌಡರ ಕುಟುಂಬವನ್ನು ಲಿಂಗ ಪಾರು ಮಾಡಿದ ರೋಚಕ ವಿವರಗಳನ್ನು ಕುರಿತು ಬರೆಯಿರಿ.

೨) ಅಮಾಸ, ದಲಿತರ ಬದುಕಿನ ಕತ್ತಲೆಯನ್ನು ಹೇಗೆ ಪ್ರತಿನಿಧಿಸುತ್ತಿದ್ದಾನೆ ? ಕಥೆಯ ವಿಶೇಷ ಗುಣ ತಿಳಿಸಿ.

6. ಒಂದು ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ದೇವರ ಬಗೆಗಿನ ಜನರ ನಂಬಿಕೆಗಳನ್ನು ಮೂರ್ತಿ ರಾಯರು ಹೇಗೆ ದಾಖಲಿಸಿದ್ದಾರೆ?

೨) ಜನ ದೇವರಲ್ಲಿ ಯಾವ ಬಗೆಯ ಗುಣ - ಸ್ವರೂಪ, ಸಾಮ್ಯ ಕಂಡುಕೊಳ್ಳುತ್ತಾರೆ?

* * *

https://www.kuvempuonline.com
https://www.kuvempuonline.com
https://www.kuvempuonline.com
Whatsapp @ 9300930012
Send your old paper & get 10/-
अपने पुराने पेपर्स भेजे और 10 रुपये पायें,
Paytm or Google Pay से



https://www.kuvempuonline.com